ಶ್ರೀ ಎಸ್.ಎನ್. ಕೃಷ್ಣಯ್ಯಶೆಟ್ಟಿ (ಧಾರ್ಮಿಕ ದತ್ತಿ ಇಲಾಖಾ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎನ್.ಸಂಪಂಗಿ ಇವರು ನಿಯಮ 73ರಡಿಯಲ್ಲಿ ಕೇಳಿರುವ ಗಮನಸೆಳೆಯುವ ಸೂಚನೆ ಸಂಖ್ಯೆ 26ಕ್ಕೆ ಉತ್ತರ.

ಪ್ರಶ್ನೆ :-

ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಕುಡಿಯುವ ನೀರಿನ ಅವಶ್ಯಕತೆ ಹೆಚ್ಚಾಗಿರುವುದರಿಂದ ಈ ಕೇಂದ್ರ ಸ್ಥಾನಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು. ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು, ದೊಡ್ಡಬಳ್ಳಾಪುರ ಈ ಪ್ರದೇಶಗಳಲ್ಲೂ ಅಧಿಕವಾದ ಫ್ಲೋರೈಡ್ ಇರುವ ನೀರು ಇರುವುದರಿಂದ ಕಾವೇರಿ ಮೂಲದಿಂದಲೇ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕೆಂದು ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಮತ್ತು ನಗರಸಭೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಉತ್ತರ :-

ಚಿಕ್ಕಬಳ್ಳಾಪುರ :- ಚಿಕ್ಕಬಳ್ಳಾಪುರ ನಗರವು ಜಿಲ್ಲಾ ಕೇಂದ್ರವಾಗಿದ್ದು ಜಕ್ಕಲಮಡಗು ಜಲಾಶಯದಿಂದ ಸುಮಾರು 1.00 ದಶಲಕ್ಷ ಲೀಟರ್ ನೀರು ಮತ್ತು 75 ಕೊಳವೆ ಬಾವಿಗಳಿಂದ ಸುಮಾರು 2.40 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡುತ್ತಿದ್ದು, ಪ್ರಸ್ತುತ 4 ದಿನಕ್ಕೊಮ್ಮೆ ತಲಾ ದಿನಂಪ್ರತಿ 50 ಲೀಟರ್ ನೀರನ್ನು ನಗರಸಭೆ ವತಿಯಿಂದ ಸರಬರಾಜು ಮಾಡಲಾಗುತ್ತಿದೆ. ಚಿಕ್ಕಲಮಡಗು ಜಲಾಶಯದಿಂದ ನೀರು ಸರಬರಾಜು ಮಾಡುವ 2ನೇ ಹಂತದ ಯೋಜನೆಯನ್ನು ರೂ.27.00 ಕೋಟಿಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯ ಅನುಷ್ಠಾನದ ನಂತರ ಕಲಾ ದಿನಂಪ್ರತಿ 100 ಲೀಟರ್ ನಂತೆ ಸರಬರಾಜು ಮಾಡಲಾಗುತ್ತಿದೆ.

ಬಾಗೇಪಲ್ಲಿ :- ಬಾಗೇಪಲ್ಲಿ ಪಟ್ಟಣಕ್ಕೆ ಚಿತ್ರಾವತಿ ಬ್ಯಾರೇಜ್‌ನಿಂದ ನೀರನ್ನು ಪಡೆದು, ಶುದ್ಧೀಕರಿಸಿ, ಮಾರ್ಚ್ - 2006 ರಿಂದ 1.70 ದಶಲಕ್ಷ ಲೀಟರ್ ನೀರು ಸರಬರಾಜು ಮಾಡುತ್ತಿದ್ದು, ಪ್ರಸ್ತುತ ಸರಬರಾಜಿನ ಪ್ರಮಾಣವು ದಿನಂಪ್ರತಿ ತಲಾ 70 ಲೀಟರ್‌ನಂತೆ

ಇರುತ್ತದೆ. ನೀರು ಸರಬರಾಜು ನಿರ್ವಹಣೆಯನ್ನು ಪಟ್ಟಣ ಪಂಚಾಯತ್ ರವರು ನಿರ್ವಹಿಸಿರುತ್ತಾರೆ. ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದಿಲ್ಲ.

ಗುಡಿಬಂಡೆ :- ಕೊಳವೆ ಬಾವಿಯ ನೀರಿನಲ್ಲಿ ಅಧಿಕ ಫ್ಲೋರೈಡ್ ಅಂಶವಿರುವುದರಿಂದ ಗುಡಿಬಂಡೆ ಪಟ್ಟಣಕ್ಕೆ ಚಿತ್ರಾವತಿ ಬ್ಯಾರೇಜ್‌ನಿಂದ ನೀರನ್ನು ಪಡೆದು, ಶುದ್ಧೀಕರಿಸಿ, ಮಾರ್ಚ್ 2006 ರಿಂದ 0.70 ದಶಲಕ್ಷ ಲೀಟರ್ ನೀರು ಸರಬರಾಜು ಮಾಡುತ್ತಿದ್ದು, ತಲಾ ದಿನಂಪ್ರತಿ 70 ಲೀಟರ್‌ನಂತೆ ನೀರು ಸರಬರಾಜು ಮಾಡಲಾಗುತ್ತಿದ್ದು, ಅದರ ನಿರ್ವಹಣೆಯನ್ನು ಪಟ್ಟಣ ಪಂಚಾಯತ್‌ರವರು ನಿರ್ವಹಿಸುತ್ತಿದ್ದಾರೆ. ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದಿಲ್ಲ.

ಗೌರಿಬಿದನೂರು :- ಗೌರಿಬಿದನೂರು ಪಟ್ಟಣಕ್ಕೆ 29 ಕೊಳವೆ ಬಾವಿಗಳಿಂದ ಸುಮಾರು 1.5 ದಶಲಕ್ಷ ಲೀಟರ್ ನೀರು ಸರಬರಾಜು ಮಾಡುತ್ತಿದ್ದು ಪ್ರಸ್ತುತ ದಿನ ಬಿಟ್ಟ ದಿನ ತಲಾ 42 ಲೀಟರ್ ನಂತೆ ಪುರಸಭೆಯರೇ ನೀರಿನ ಸರಬರಾಜು ಮತ್ತು ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮ ಪಡಿಸಲು ಉತ್ತರ ಪಿನಾಕಿನಿ ಮೂಲದಿಂದ ನೀರು ಸರಬರಾಜು ಮಾಡುವ ರೂ.499 ಲಕ್ಷಗಳ ಯೋಜನೆಗೆ ದಿನಾಂಕ : 13-08-2008ರಲ್ಲಿ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಸದರಿ ಯೋಜನೆಯ ಅನುಷ್ಠಾನದ ನಂತರ ಪಟ್ಟಣಕ್ಕೆ ದಿನಂಪ್ರತಿ ತಲಾ 100 ಲೀಟರ್ ನಂತೆ ನೀರು ಸರಬರಾಜು ಮಾಡಲಾಗುವುದು.

ದೊಡ್ಡಬಳ್ಳಾಪುರ :- ದೊಡ್ಡಬಳ್ಳಾಪುರ ಪಟ್ಟಣಕ್ಕೆ 120 ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡುತ್ತಿದ್ದು, ನಗರಸಭೆಯರೇ ನೀರಿನ ಸರಬರಾಜು ಮತ್ತು ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. ಜಕ್ಕಲಮಡಗು ಜಲಾಶಯವನ್ನು 260 MLD ಯಿಂದ 4390 MLD ಗೆ ಪರಿಷ್ಕರಿಸಿ ದೊಡ್ಡಬಳ್ಳಾಪುರ ಮತ್ತು ಚಿಕ್ಕಬಳ್ಳಾಪುರ ಪಟ್ಟಣಗಳಿಗೆ ನೀರು ಸರಬರಾಜು ಮಾಡಲು ಸರ್ಕಾರದಿಂದ ರೂ.2249.68 ಮತ್ತು 2700.00 ಲಕ್ಷಗಳಿಗೆ ಅನುಕ್ರಮವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ದೊಡ್ಡಬಳ್ಳಾಪುರ ನೀರು ಸರಬರಾಜು ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿ ಪ್ರಗತಿಯಲ್ಲಿದೆ. ಜಕ್ಕಲಮಡಗು ಜಲಾಶಯ ನಿರ್ಮಾಣಕ್ಕೆ ಚಿಕ್ಕಬಳ್ಳಾಪುರ ಪುರಸಭೆ ಮತ್ತು ಚಿಕ್ಕಬಳ್ಳಾಪುರ ಜನರಿಂದ ಇದ್ದ ಅಡಚಣೆ ನಿವಾರಿಸಲಾಗಿದ್ದು,

ಚಿಕ್ಕಬಳ್ಳಾಪುರ ನಗರ ಸಭೆಯಿಂದ ಜಲಾಶಯ ನಿರ್ಮಾಣಕ್ಕೆ ದಿನಾಂಕ : 12-01-2009 ರಂದು ಅನುಮತಿ ನೀಡಿದೆ. ಈ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಕಾಮಗಾರಿಯನ್ನು 9 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು. ಜಲಾಶಯದ ನಿರ್ಮಾಣದ ನಂತರ ದೊಡ್ಡಬಳ್ಳಾಪುರ ಪಟ್ಟಣಕ್ಕೆ ಜಕ್ಕಲಮಡಗು ಜಲಾಶಯದಿಂದ ನೀರನ್ನು ಪಡೆದು ಸರಬರಾಜು ಮಾಡಲಾಗುವುದು.

ಮೇಲ್ಕಂಡ ಚಿಕ್ಕಬಳ್ಳಾಪುರ ಜಿಲ್ಲೆಗೆ ಹಾಗೂ ಜಿಲ್ಲೆಯ ಇತರೆ ತಾಲ್ಲೂಕುಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಕುಡಿಯುವ ನೀರಿನ ಅವಶ್ಯಕತೆ ಹೆಚ್ಚಾಗಿರುವುದರಿಂದ ಈ ಕೇಂದ್ರ ಸ್ಥಾನಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಕುಡಿಯುವ ನೀರಿನ ಅವಶ್ಯಕತೆ ಹೆಚ್ಚಾಗಿರುವುದರಿಂದ ಈ ಕೇಂದ್ರ ಸ್ಥಾನಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು, ದೊಡ್ಡಬಳ್ಳಾಪುರ, ಈ ಪ್ರದೇಶಗಳಲ್ಲೂ ಅಧಿಕವಾದ ಫ್ಲೋರೈಡ್ ಇರುವ ನೀರು ಇರುವುದರಿಂದ ಕಾವೇರಿ ಮೂಲದಿಂದಲೇ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕೆಂದು ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ನಗರಸಭೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-

(ಮಾನ್ಯ ಸಚಿವರ ಉತ್ತರದ ಪ್ರತಿಯನ್ನು ಲಗತ್ತಿಸಿದೆ.)

ಶ್ರೀ ಎನ್. ಸಂಪಂಗಿ :- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಕಳೆದ ಜೂನ್‌ನಲ್ಲಿ ನಡೆದಂಥ ವಿಧಾನಸಭೆ ಅಧಿವೇಶನದಲ್ಲಿ ಇದೇ ಗಮನವನ್ನು, ಇದೇ ಪ್ರಶ್ನೆಯನ್ನು ನಗರಾಭಿವೃದ್ಧಿ ಸಚಿವರಿಗೆ ಹಾಕಿದ್ದೆ. ಅವತ್ತು ಗಮನ ಸೆಳೆದಾಗ ಅದಕ್ಕೆ ಉತ್ತರವನ್ನು ಕೊಟ್ಟಿದ್ದರು. ಆದರೆ ಸದನವನ್ನು ಆಗ

ಮುಂದೂಡಲಾಯಿತು. ಆ ಉತ್ತರ ಮತ್ತು ಇವತ್ತು ಕೊಟ್ಟಂಥ ಉತ್ತರ ಎರಡೂ ಒಂದೇ ರೀತಿ ಇದೆ. ಅವತ್ತಾದ ಮೇಲೆ ಮತ್ತೆ ಆರು ತಿಂಗಳಾದ ನಂತರ ಕೂಡ ಅದೇ ಉತ್ತರವನ್ನು ಕೊಟ್ಟಿದ್ದಾರೆ. ಒಂದು ವಿಚಾರದಲ್ಲಿಯೂ ಕೂಡ ಇದರಲ್ಲಿ ಯಾವ ರೀತಿಯ ಬದಲಾವಣೆ ಇಲ್ಲ. ಅಂದರೆ ಕಳೆದ 7 ತಿಂಗಳಿನಿಂದಲೂ ಕೂಡ ಯಾವ ಕಾರ್ಯವನ್ನೂ ಈ ಸಂಬಂಧ ಅಲ್ಲಿ ಇವತ್ತಿನವರೆಗೂ ಮಾಡಿಯೇ ಇಲ್ಲ. ಆರು ತಿಂಗಳ ಹಿಂದೆ ಕೊಟ್ಟಿರುವ ಉತ್ತರ ಮತ್ತು ಮತ್ತು ಇವೊತ್ತು ಕೊಟ್ಟಿರುವ ಉತ್ತರ ಎರಡೂ ಒಂದೇ ಇದೆ. ಇನ್ನು ಆರು ತಿಂಗಳು ಕಳೆದರೂ ಕೂಡ ಇವರು ಇದೇ ಉತ್ತರವನ್ನು ಕೊಡುತ್ತಾರೆ. ಕುಡಿಯುವ ನೀರಿನ ವಿಚಾರದಲ್ಲಿ ಗಡಿನಾಡಿನ ಪ್ರದೇಶದವರು ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಇವತ್ತು ಜಿಲ್ಲೆಯಲ್ಲಿ 1000 ದಿಂದ 1200 ಅಡಿಗಳವರೆಗೂ ಬೋರ್ ಕೊರೆದರೂ ನೀರು ಸಿಕ್ಕುತ್ತಿಲ್ಲ. ಸಿಕ್ಕಿದರೂ ಕೂಡ fluoride content ಜಾಸ್ತಿ ಇರುವ ನೀರು ಸಿಗುತ್ತದೆ. ಇಂಥ ನೀರನ್ನು ಕುಡಿದ ಮಕ್ಕಳುಗಳು ಅಂಗವಿಕಲರಾಗುತ್ತಿದ್ದಾರೆ. ವೃದ್ಧರು ಕಾಲು ನೋವು ಮತ್ತು ಮೂಳೆ ನೋವಿನಿಂದ ಬಳಲುತ್ತಿದ್ದಾರೆ. ಇಂಥ ನೀರನ್ನು ಕುಡಿದವರು Fluorosis ಖಾಯಿಲೆಯಿಂದ ಬಳಲುತ್ತಿದ್ದಾರೆ. ಇದೇ ರೀತಿ ಅನೇಕ ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರಕ್ಕೂ ಹಾಗೂ ನಮಗೂ ಗೊತ್ತಿದೆ.

ಇವತ್ತು ಉತ್ತರ ಕೊಟ್ಟಿದ್ದಾರೆ. ನಾನು ಕೇವಲ ಕುಡಿಯುವ ನೀರಿಗಾಗಿ ಮಾತ್ರ ಕೇಳುತ್ತಿದ್ದೇನೆ. ನಾನು ಗಣಿಗಾರಿಕೆಗೆ ಅಥವಾ ಬೇರೆ ಯಾವುದಕ್ಕೂ ಲೈಸನ್ಸ್ ಕೇಳುತ್ತಿಲ್ಲ. ನಾನು ಕೇಳುತ್ತಿರುವುದು ಕುಡಿಯುವ ನೀರಿಗೆ ಮಾತ್ರ. ನಾವು ಕಾವೇರಿ ನೀರನ್ನು ಕೊಡಿ ಎಂದು ಕೇಳುತ್ತಿದ್ದೇವೆ. ಸರ್ ಎಂ.ವಿಶ್ವೇಶ್ವರಯ್ಯನವರು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನ ಒಂದು ಸಣ್ಣ ಮುದ್ದೇನಹಳ್ಳಿಯಲ್ಲಿ ಜನಿಸಿದವರು. ಇವತ್ತು ಅವರ ಜಿಲ್ಲೆಯಲ್ಲಿ ಅವರ ಮನೆಯ ಹತ್ತಿರ ಕುಡಿಯುವ ನೀರಿಲ್ಲ. ಕರ್ನಾಟಕ ರಾಜ್ಯದಲ್ಲಿ ಅವರು ಮಾಡಿದಂಥ ಅನೇಕ ಕೆಲಸಗಳನ್ನು ನಾವು ನೋಡುವುದಾದರೆ,

ಅಧ್ಯಕ್ಷರು :- ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಭಾಷಣ ಮಾಡಿ. ಈಗ ಗಮನ ಸೆಳೆಯುವ ಸೂಚನೆಯಲ್ಲಿ ಮಂತ್ರಿಗಳು ಉತ್ತರಿಸಿದ ಮೇಲೆ ಕೆಲವು ಸ್ಪಷ್ಟೀಕರಣ ಕೇಳಬೇಕಾಗುತ್ತದೆ. ನಿಮಗೆ ಕೆಲಸ ಆಗಬೇಕು. ಅದು ಯಾವ ರೀತಿ ಕೆಲಸ ತೆಗೆದುಕೊಳ್ಳಬೇಕೋ ನೀವು ಆ ರೀತಿಯಲ್ಲಿ ತೆಗೆದುಕೊಳ್ಳಿ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನೀವು ಬೇಕಾದಷ್ಟು ವಿಷಯಗಳು ಇರುತ್ತವೆ, ಆಗ ಮಾತನಾಡಿ ನಾನು ಅವಕಾಶ ಕೊಡುತ್ತೇನೆ. ಆದರೆ,

ಇಲ್ಲಿ ತಾವೇನು ಸ್ಪಷ್ಟೀಕರಣ ಕೇಳಬೇಕೋ ಅದನ್ನು ದಯವಿಟ್ಟು ಕೇಳಿ. ಮಂತ್ರಿಗಳು ಉತ್ತರಿಸಿದ್ದಾರೆ, ನಿಮಗೇನು ಆಗಬೇಕೆಂಬುದನ್ನು ಹೇಳಿ. ಅದನ್ನು ಕಾಲಮಿತಿಯೊಳಗೆ ಮಾಡಿ ಎಂದು ಹೇಳಿ. ಸುಮ್ಮನೆ ಚರ್ಚೆ ಮಾಡಿಕೊಂಡು ಹೋದರೆ ಮೂಲ ವಿಷಯಕ್ಕೆ ಧಕ್ಕೆ ಬರುತ್ತದೆ. ನೀವು ಸ್ಪಷ್ಟೀಕರಣ ಕೇಳಿ.

ಶ್ರೀ ಎನ್. ಸಂಪಂಗಿ :- ನಾನು ಅದನ್ನೇ ಕೇಳುತ್ತಿದ್ದೇನೆ. ಅವರು ಉತ್ತರದಲ್ಲಿ ಕಾವೇರಿ ನೀರಿನ ಪ್ರಶ್ನೆಯೇ ಇಲ್ಲವೆಂದು ಉತ್ತರಿಸಿದ್ದಾರೆ. ಕಾವೇರಿ ನೀರನ್ನು ಏಕೆ ಕೊಡುವುದಕ್ಕಾಗುವುದಿಲ್ಲವೆಂದು ನಾನು ಪ್ರಶ್ನಿಸುತ್ತಿದ್ದೇನೆ. ಸರ್.ಎಂ. ವಿಶ್ವೇಶ್ವರಯ್ಯನವರು ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಹುಟ್ಟಿದಂಥವರು. ಭದ್ರಾವತಿ ಉಕ್ಕಿನ ಕಾರ್ಖಾನೆ ಇರಬಹುದು, ಕನ್ನಂಬಾಡಿ ಕೃಷ್ಣ ರಾಜ ಸಾಗರವನ್ನು ಕಟ್ಟಿರತಕ್ಕಂಥ ವಿಶ್ವೇಶ್ವರಯ್ಯನವರು ಆ ಭಾಗದ ಜನರಿಗೆ ಕಾವೇರಿ ನೀರನ್ನು ಕೊಡುವುದರ ಮೂಲಕ ಅವರೆಲ್ಲರೂ ಸಂತೋಷದಿಂದ ಇದ್ದಾರೆ. ಹೀಗಾಗಿ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಾಗಿದೆ, ನೀರಾವರಿ ಸೌಲಭ್ಯ ಸಿಕ್ಕಿದೆ. ಈ ಸೌಲಭ್ಯ ಅವರೇ ಹುಟ್ಟಿದ ಮನೆಯಲ್ಲಿ ಇಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಯ ಜನರು, ವಿಶ್ವೇಶ್ವರಯ್ಯನವರು ಊರಿಂದ ಹೊರಗೆ ಎಲ್ಲವನ್ನು ಮಾಡಿದ್ದಾರೆ, ಆದರೆ ಊರಿನ ಜನಕ್ಕೆ ಏನೂ ಮಾಡಿಲ್ಲವೆಂದು ದೊಡ್ಡದಾಗಿ ಆರೋಪಿಸುತ್ತಿದ್ದಾರೆ. ಆ ಆರೋಪದಿಂದ ಅವರನ್ನು ಮುಕ್ತರನ್ನಾಗಿಸಬೇಕಾದರೆ ಈ ಸರ್ಕಾರ ಆ ಕೆಲಸ ಮಾಡಬೇಕಾಗಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾವೇರಿ ನೀರನ್ನು ತಂದಿದ್ದೀರಿ. ಅದೇ ನೀರನ್ನು ಕೇವಲ 22 ಕಿ.ಮೀ. ದೂರವಿರುವಂಥ ವಿಶ್ವೇಶ್ವರಯ್ಯನವರ ಜನ್ಮಸ್ಥಳವಾದಂಥ ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಆ ಕಾವೇರಿ ನೀರನ್ನು ಕೊಡಬೇಕು. ಏಕೆಂದರೆ, ಈಗಾಗಲೇ ನೇತ್ರಾವತಿ ನದಿಯ ಮತ್ತು ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ನೀರನ್ನು ಕೊಡುತ್ತೇವೆಂದು ಸುಳ್ಳು ಭರವಸೆಗಳನ್ನು ಕೊಟ್ಟಿದ್ದಾರೆ. ಹೀಗಾಗಿ ಕೇವಲ 22 ಕಿ.ಮೀ. ದೂರದಲ್ಲಿರುವ ನಮ್ಮ ತಾಲ್ಲೂಕಿಗೆ ಪೈಪ್‌ಲೈನ್ ಮೂಲಕ ಕಾವೇರಿ ನೀರನ್ನು ಅವರ ಮನೆಗೆ ಕೊಡಿ, ಚಿಕ್ಕಬಳ್ಳಾಪುರ ಜಿಲ್ಲೆಗೆ ಕೊಡಿ. ಅದೇ ಪ್ರಕಾರ ಇವತ್ತೇನು ಫ್ಲೋರೈಡ್‌ಗಳಿಗೆ ತುತ್ತಾದ ಪ್ರದೇಶಗಳೇನಿವೆ, ಗುಡಿಬಂಡೆ, ಬಾಗೇಪಲ್ಲಿ, ಚಿಂತಾಮಣಿ, ಶಿಡ್ಲಘಟ್ಟ, ದೊಡ್ಡಬಳ್ಳಾಪುರ, ಈ ಭಾಗಕ್ಕೂ ಕೂಡ ಅವರು ಕಾವೇರಿ ನೀರನ್ನು ಕೊಡಬಹುದು. ಇದಕ್ಕೆ ಅವರು ಮನಸ್ಸು ಮಾಡಬಹುದು. ಏಕೆಂದರೆ, ವಿಶ್ವೇಶ್ವರಯ್ಯನವರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ, ಕಾವೇರಿ ನೀರನ್ನು ನಮ್ಮ ಜಿಲ್ಲೆಗೆ ತಂದು ಕೊಟ್ಟರೆ ಮಾತ್ರ ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ಮಂತ್ರಿಗಳಲ್ಲಿ ನಾನು ನಮ್ರವಾಗಿ ವಿನಂತಿಸುತ್ತೇನೆ,

ಇದು ಒಂದು ಒಳ್ಳೆಯ ಕಾರ್ಯವಾಗುತ್ತದೆ, ನಮ್ಮ ಜಿಲ್ಲೆಗೆ ಕಾವೇರಿ ನೀರನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಬಚ್ಚೇಗೌಡ :- ಮಾನ್ಯ ಸಂಪಂಗಿಯವರ ಗಮನ ಸೆಳೆಯುವ ಸೂಚನೆಯ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾವೇರಿ ನೀರನ್ನು ತಂದಿದ್ದೀರಿ. ಚಿಕ್ಕಬಳ್ಳಾಪುರ ನೀರು ಸರಬರಾಜು ಬಗ್ಗೆ ಮಾಹಿತಿ ಕೊಟ್ಟರು. ಚಿಕ್ಕಬಳ್ಳಾಪುರದ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಿದೆ. ನೀರು ಸಿಗುತ್ತದೆ, ಆದರೆ ನೀರಿನಲ್ಲಿ ಫ್ಲೋರೈಡ್ ಮತ್ತು ನೈಟ್ರೇಟ್ ಅಂಶಗಳು ಇರುವುದು ವೇದ್ಯವಾಗಿದೆ. ಆದ್ದರಿಂದ ಆ ನೀರು ಕುಡಿಯುವುದಕ್ಕೆ ಯೋಗ್ಯವಲ್ಲ. ಆದರೂ ಕೂಡ ಅನಿವಾರ್ಯವಾಗಿ ಜನರು ಆ ನೀರನ್ನು ಕುಡಿದು ಇವತ್ತು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಜನಿಸಿದಂಥ ಸರ್ ಎಂ.ವಿಶ್ವೇಶ್ವರಯ್ಯನವರು ಕನ್ನಂಬಾಡಿ ಕಟ್ಟಿ ರಾಜ್ಯದ ಜನತೆಗೆ ಕುಡಿಯುವ ನೀರನ್ನು ಕೊಟ್ಟಿದ್ದಾರೆ, ಆ ನೀರು ಇವತ್ತು ದೇವನ ಹಳ್ಳಿಯವರೆಗೂ ಬಂದಿರತಕ್ಕಂಥದ್ದನ್ನು ಕೇವಲ 22 ಕಿ.ಮೀ. ಮುಂದಕ್ಕೆ ತಂದು ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಹಳ್ಳಿಗಳಿಗೆ ಆ ನೀರನ್ನು ಸರಬರಾಜು ಮಾಡುವುದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರದಿಂದ ನಾವು ನೇರವಾದ ಸ್ಪಷ್ಟನೆ ಕೇಳಬಯಸುತ್ತೇನೆ.

ಶ್ರೀ ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ್ದೇನೆ. ಮಾನ್ಯ ಸದಸ್ಯರೀರ್ವರ ಕಳಕಳಿ ನಮಗೆ ಅರ್ಥವಾಗುತ್ತದೆ. ಏಕೆಂದರೆ, ಒಂದು ಆಡಳಿತ ಸರ್ಕಾರ ಕುಡಿಯುವ ನೀರನ್ನು ಕೊಡಬೇಕು. ತಾವು ಮಾತನಾಡುವಾಗ, ನಾವು ಬೇರೆ ಏನನ್ನೂ ಕೇಳುತ್ತಿಲ್ಲ ಕುಡಿಯುವ ನೀರನ್ನು ಮಾತ್ರ ಕೇಳುತ್ತಿದ್ದೇವೆಂದು ಬಹಳ ಚೆನ್ನಾಗಿ ಹೇಳಿದಿರಿ. ಅದು ನಮ್ಮ ಮೊದಲನೆ ಆದ್ಯತೆ. ಶುದ್ಧವಾದ ನೀರನ್ನು ಆರೋಗ್ಯಕ್ಕೋಸ್ಕರ ಕೊಡಬೇಕು. ರಾಜ್ಯದಲ್ಲಿ ಅನೇಕ ಕಡೆ ಈ ಫ್ಲೋರೈಡ್ ಅಂಶಗಳಿಂದ ಜನತೆ ಒದ್ದಾಡುತ್ತಿರುವುದು, ಬಳಲುತ್ತಿರುವುದು, ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿರುವುದು, ನಮ್ಮಗೆಲ್ಲ ಗೊತ್ತಿದೆ. ಸರ್ಕಾರದ ಒಂದು ಯೋಜನೆಯಿದೆ. ಎಲ್ಲೂ ಕೂಡ ಬೋರ್‌ವೆಲ್‌ಗಳಿಂದ ಜನರಿಗೆ ನೀರನ್ನು ಕೊಡಬಾರದು. ಜಲಾಶಯಗಳಿಂದ ನೀರು ಕೊಡಬೇಕೆನ್ನುವ ಯೋಜನೆಯನ್ನು ನಾವು ಅನುಷ್ಠಾನಕ್ಕೆ ತರುತ್ತೇವೆ.

ಈಗ ನೀವು ಏನು ತುರ್ತಾಗಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆವಿಗೂ ಕಾವೇರಿ ನೀರು ಬಂದಿದೆ, ಅಲ್ಲಿಂದ ಕೇವಲ 22 ಕಿ.ಮೀ. ಅಂತರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಇದೆ. ಆ ಜಿಲ್ಲೆಗೆ ನೀರು ಕೊಡಬೇಕೆಂದು ಹೇಳಿದ್ದೀರಿ, ಇದನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸಿ, ಕಾವೇರಿ ನೀರು ನಮಗೇನು ಅವಾರ್ಡಗೆ ಅನುಕೂಲವಾಗಿ ಲಭ್ಯತೆಯಿದೆ, ಅದನ್ನು ಪರಿಶೀಲಿಸಿ, ಇದರ ಬಗ್ಗೆ ಅಗತ್ಯವಾದ ಕ್ರಮ ತೆಗೆದುಕೊಂಡು ಸ್ವಚ್ಚವಾದ ಕುಡಿಯುವ ನೀರು ಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಇ) ಗಮನ ಸೆಳೆಯುವ ಸೂಚನೆ

ವಿಷಯ :- ಬೀದರ್ ಜಿಲೆಯಲ್ಲಿ ವಿದ್ಯುತ್ ಶಾಖೋತ್ಪನ್ನ ಕೇಂದ್ರವನ್ನು ಸ್ಥಾಪಿಸುವುದರ ಬಗ್ಗೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) :- ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ತೀವ್ರವಾದ ವಿದ್ಯುತ್ ಸಮಸ್ಯೆ ಇರುವುದರಿಂದ ಈ ಭಾಗದ ಜನರು ಮತ್ತು ರೈತರು ತೊಂದರೆಗೊಳಗಾಗಿದ್ದಾರೆ. ವಿದ್ಯುತ್ ಸಮಸ್ಯೆಯನ್ನು ಪರಿಹರಿಸಲು ಒಂದು ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವುದರ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :- (ಹೇಳಿಕೆಯ ಪ್ರತಿ ಲಗತ್ತಿಸಿದೆ)

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ ರವರು ನಿಯಮ 73 ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಇಂಧನ ಸಚಿವರ ಹೇಳಿಕೆ :-

ಬೀದರ್ ಜಿಲ್ಲೆ ಒಳಗೊಂಡಂತೆ ರಾಜ್ಯದಲ್ಲಿ ವಿದ್ಯುತ್ ಅಭಾವ ತೀವ್ರವಾಗಿದ್ದು ಈ ದಿಸೆಯಲ್ಲಿ ಗುಲ್ಬರ್ಗಾದಲ್ಲಿ (ಫರತಾಬಾದ್) 1320 ಮೆಗಾ ವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಯೋಜನೆಗೆ ದಿನಾಂಕ : 7-10-2008 ರಂದು ಸರ್ಕಾರದ ಅನುಮೋದನೆ ನೀಡಲಾಗಿದೆ. ಈ ಯೋಜನೆಗಾಗಿ ಭೂ ಸ್ವಾಧೀನ ಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಗುಲ್ಬರ್ಗಾ ಜಿಲ್ಲೆ ಇವರಿಗೆ ಭೂಸ್ವಾಧೀನ ಕಾಯ್ದೆ